# ಆಹಾ ಸುದ್ದಿ!

★ ಸಸಿತೋಟ



ಚೀನಾದ ಹರ್ಬಿನ್‌ನಲ್ಲಿರುವ 'ರೊಬಾಟ್' ಉಪಾಹಾರಗೃಹವಿದು. ಒಟ್ಟು 20 ರೊಬಾಟ್‌ಗಳು ಪಾಳಿಯ ಮೇಲೆ ಜಟ್‌ಪಟ್ ಕೆಲಸ ಮಾಡುತ್ತವಂತೆ. ಖಾದ್ಯ ತಯಾರಿಕೆಯಿಂದ ಹಿಡಿದು ಗ್ರಾಹಕರು ಬೇಡಿದ್ದನ್ನು ಪೂರೈಸುವವರೆಗಿನ ಕೆಲಸ ಇವುಗಳದ್ದೇ. ಬಿಲ್ ಹಣ ತೆಗೆದುಕೊಳ್ಳುವವರು ಮಾತ್ರ ಮುಖದಲ್ಲಿ ದೇಶಾವರಿ ನಗು ಬೀರುವ ಮಾನವರು. ಗ್ರಾಹಕರಿಗೆ ಸ್ವಾಗತ ನುಡಿಯನ್ನೂ ಹೇಳುವ ಇವು, ಕಾಫಿಯಲ್ಲಿ ಬಿದ್ದ ನೊಣವನ್ನು ಬೆರಳಿಂದಾಚೆ ಹಾಕುವುದನ್ನು ಇನ್ನು ಕಲಿತಿಲ್ಲವೇನೋ! ಜೊತೆಗೆ ಕದ್ದು ತಿನ್ನುವ ಅಭ್ಯಾಸ ಚೂರೂ ಇಲ್ಲ ಬಿಡಿ ಎನ್ನುವುದು ಮಾಲೀಕರ ಶಿಫಾರಸ್ಸು.

ಬ್ರೆಜಿಲ್‌ನ ಒಸಾಸ್ಕೋದ ರೈಲು ನಿಲ್ದಾಣದ ಪಾವಟಿಗೆಗಳಿಗೆ ಪಿಯಾನೊ ಕೀಗಳನ್ನು ಅಳವಡಿಸಲಾಗಿದೆಯಂತೆ. ಕಾಲಿಟ್ಟರೆ ಸಾಕು, 'ಸ ರಿ ಗ..' ಎಂದು ಸ್ವರಗಳನ್ನು ಹೊರಡಿಸಿ ಪ್ರಯಾಣಿಕರನ್ನು ಸಂಗೀತಲೋಕಕ್ಕೆ ಕರೆದುಕೊಂಡು ಹೋಗಿಬಿಡುತ್ತವೆ ಈ ಪಾವಟಿಗೆಗಳು. ರೈಲ್ವೆ ಇಲಾಖೆ ಅಧಿಕಾರಿಗಳ ತಲೆ ಎಂದರೆ ತಲೆ. ಸಂಗೀತಕ್ಕೆ ತಲೆ ಆಡಿಸುವ ಪ್ರಯಾಣಿಕರು ತಡವಾಗಿ ಆಗಮಿಸುವ ರೈಲುಗಳ ಬಗ್ಗೆ ತಲೆ ಕೆಡಿಸಿಕೊಳ್ಳಲಾರರು ಎಂಬ ಐಡಿಯಾ ಇದರ ಹಿಂದಿರಬಹುದು.



ಬ್ರೆಜಿಲ್ ಜೈಲಿನೊಳಗೆ ಬಿಳಿ ಬೆಕ್ಕೊಂದು ಆರಾಮವಾಗಿ ಎಂಟ್ರಿ ಕೊಡುತ್ತಿತ್ತು. ಮುದ್ದಾಡಲು ಹೋದ ಸಿಬ್ಬಂದಿ ಬೆಕ್ಕಿನಿಂದ ಪರಚಿಸಿಕೊಳ್ಳುವುದಿರಲಿ, ತಾವೇ ಮೈ ಪರಚಿಕೊಂಡರು. ಬೆಕ್ಕಿನ ಮೈಗೆ ಡ್ರಿಲ್ಲಿಂಗ್ ಯಂತ್ರ, ಮೊಬೈಲ್ ಫೋನ್, ಚಾರ್ಜರ್, ಬ್ಯಾಟರಿ ಎಲ್ಲವನ್ನೂ ಇಟ್ಟು ನೀಟಾಗಿ ಟೇಪ್ ಅಂಟಿಸಲಾಗಿತ್ತು. ಬೆಕ್ಕಿನ ಬಾಯಿ ಬಿಡಿಸಲು ಅದಕ್ಕೆ ಮಾತು ಬರುವುದಿಲ್ಲ, ಕೈದಿಗಳ ಬಾಯಿ ಬಿಡಿಸಬೇಕಾದರೆ 250ಕ್ಕೂ ಅಧಿಕ ಮಂದಿಗೆ ತದುಕಬೇಕು. ಸದ್ಯ ಕಳ್ಳ ಬೆಕ್ಕು ಪ್ರಾಣಿಗಳ ಪುನರ್‌ವಸತಿ ಕೇಂದ್ರದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದೆ.

ಮನಿಲಾದಲ್ಲಿ ಶವಪೆಟ್ಟಿಗೆಯೊಳಗೆ 'ಕರೊಕೆ' ಸಂಗೀತ ವ್ಯವಸ್ಥೆ ಮಾಡಿದ್ದು ಸುದ್ದಿಯಾಗಿತ್ತು. ಈಗ ಸ್ವೀಡನ್ನಿನಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶವಪೆಟ್ಟಿಗೆಗೆ ಸ್ಪೀಕರ್ ಅಳವಡಿಸಲಾಗಿದ್ದು, ಪ್ಲೇ ಲಿಸ್ಟನ್ನು ಬದುಕಿರುವ ಬಂಧುಗಳು ಅಪ್‌ಡೇಟ್ ಮಾಡಬಹುದು. ಮೃತಪಟ್ಟವರ ನೆಚ್ಚಿನ ಗೀತೆಗಳನ್ನು ಇವರು ಮನೆಯಿಂದಲೇ ಹಾಕಿ ಅವರನ್ನು ಖುಷಿ ಪಡಿಸಬಹುದು. ಯಾರಿಗೆ ಗೊತ್ತು, ಸತ್ತ ಮೇಲೂ ಆರಾಮವಾಗಿರಲು ಬಿಡಲಾರರಲ್ಲ ಎಂದು ಹೆಣ ಬಾಯ್ ಬಾಯ್ ಬಡಿದುಕೊಳ್ಳಬಹುದೋ ಏನೋ!



ಬಟ್ಟೆ ಅಲರ್ಜಿ ಇರುವ ಕೆಲವು ದೇಶಗಳಲ್ಲಿ ಈಚೆಗೆ 'ಪ್ಯಾಂಟಿಲ್ಲದ ರೈಲು ಪಯಣ' ದಿನ ಆಚರಿಸಲಾಯಿತು. ನೀಟಾಗಿ ಕೋಟು ಟೈ ಕಟ್ಟಿ ರೈಲು ನಿಲ್ದಾಣಕ್ಕೆ ಬಂದು, ಪ್ಯಾಂಟು ಕಳಚಿಟ್ಟ ಪುರುಷರು ಮತ್ತು ಮಹಿಳೆಯರು ರೈಲಿನಲ್ಲಿ ಸಂಚರಿಸಿದರು. ಬಟ್ಟೆ ಕಳಚುವುದೆಂದರೆ ಕೆಲವರಿಗೆ ಅದೇನು ಆನಂದವೋ ಗೊತ್ತಿಲ್ಲ, ಆದರೆ ಬರಿಮೈ ಅಂದ ಸವಿಯುವ ಹವ್ಯಾಸವಂತೂ ಹಲವರಿಗಿದೆ.



ಈತ ಬ್ರಿಟನ್ನಿನ 'ಸರ್ಕಸ್ ಆಫ್ ಹಾರರ್ಸ್'ನ 'ತೋಳ ಮನುಷ್ಯ' ಜೀಸಸ್ ಅಸಿವೆಸ್. ಅತಿ ಕೂದಲಿನ ಬೆಳವಣಿಗೆಯ ಈ 'ಮಿ. ರೋಮ' ನಿಂದಾಗಿ ಬ್ರಿಟನ್ ಅಧಿಕಾರಿಗಳ ರೋಮಗಳೆಲ್ಲ ನೆಟ್ಟಗೆ ನಿಂತಿವೆಯಂತೆ. ಈತನ ಉದ್ಯೋಗದ ವಿವರಗಳನ್ನು ಹಾಜರುಪಡಿಸಿ ಎಂದು ಅಲ್ಲಿಯ ಬಾರ್ಡರ್ ಏಜೆನ್ಸಿಯು ಸರ್ಕಸ್‌ಗೆ ಅನುಮತಿ ನೀಡಿದ ಅಧಿಕಾರಿಗಳ ಬೆನ್ನು ಬಿದ್ದಿದೆಯಂತೆ. ಪಾಪ, ಸರ್ಕಸ್‌ನಲ್ಲಿ ರೋಮ ಪ್ರದರ್ಶಿಸುವ ಈತನಿಗೆ ತನ್ನ ಉದ್ಯೋಗದ ಹೆಸರೇ ಗೊತ್ತಿಲ್ಲ.